<u>**ದಿನಾಂಕ:05-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಪ್ರತಿವಾದಿ ಪರ: ಶ್ರೀ. ಎಸ್.ಎಸ್,ಟಿ. ವಕೀಲರಿಂದ:</u>

ನನಗೆ ಮದುವೆಯಾಗಿ 25 ವರ್ಷಗಳ ಆಗಿರುತ್ತವೆ. ದಾವಾ ಸ್ವತ್ತಿಗೆ ನಾನು ಹೋಗಿರುತ್ತೇನೆ. ದಾವಾ ಆಸ್ತಿಯು ನನ್ನ ಅತ್ತೆಯ ಹೆಸರಿನಿಂದ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ನನ್ನ ಅತ್ತೆಯ ಹೆಸರು ಭಾರತಬಾಯಿ ಎಂದರೆ ಸರಿ. ದಾವಾ ಆಸ್ತಿಯು ನಜರಚುಕನಿಂದ ಜ್ಞಾನಬಾ ರವರ ಹೆಸರಿನಿಂದ ಭಾರತಬಾಯಿ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ.

ದಾವಾ ಆಸ್ತಿಯ ಪೂರ್ವಕ್ಕೆ ದತ್ತಾ ಗಜರೆ ರವರ ಹೊಲ, ಪಶ್ಚಿಮಕ್ಕೆ ಜಗನ್ನ ಗಜರೆ ರವರ ಜಮೀನು,ಉತ್ತರಕ್ಕೆ ಮುಕ್ತಾ ಗಜರೆ ಮತ್ತು ದಕ್ಷಿಣಕ್ಕೆ ಆನಂದ ಗಜರೆ ರವರ ಜಮೀನು ಇರುತ್ತದೆ. ದಾವೆ ಸಲ್ಲಿಸುವ ಸಮಯದಲ್ಲಿ ವಾದಪತ್ರದಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ಬೇರೆಯವರ ಹೆಸರು ಹೇಳಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಜಮೀನಿಗೆ ಫಕೀರ ಪಟ್ಟಿ ಮುಲ್ಲಾ ಎಂದು ಕರೆಯುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ ಖಂಡು ಗಜರೆ ರವರ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ಖಂಡು ಗಜರೆ ರವರು ನನ್ನ ಗಂಡನ ವಿರುದ್ಧ ಇದೇ

ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪಶ್ಚಿಮಕ್ಕೆ ನನ್ನ ಗಂಡನ ಜಮೀನು ಇದೆ ಎಂದು ಹೇಳುವ ಜಮೀನಿಗೆ ಸಂಬಂಧಿಸಿ ನನ್ನ ಗಂಡನ ವಿರುದ್ಧ ಖಂಡು ಗಜರೆ ರವರು ಮಾನ ಹಿರಿಯ ಸಿವಿಲ್ ನ್ಯಾಯಾಲಯ, ಭಾಲ್ಕಿಯಲ್ಲಿ ಮಾಲೀಕತ್ವ ಕೋರಿ ಒಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ದಾವೆ ಸಲ್ಲಿಸಿದ್ದಾರೆ ಆದರೆ ಸದರಿ ಜಮೀನು ತಮ್ಮ ಜಮೀನು ಆಗಿರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಖಂಡು ಗಜರೆ ರವರ ಪೂರ್ವಿಕರ ಸಮಾಧಿ ಇರುತ್ತವೆ ಎಂದರೆ ಸರಿಯಲ್ಲ.

ವಾದಪತ್ರದಲ್ಲಿ ಹೇಳಿರುವ ವಾಟ್ನಿಯು ನನ್ನ ಅತ್ತೆ ಮಾವ,ನಮ್ಮ ನಡುವೆ ಆದ ವಾಟ್ನಿ ಆಗಿರುತ್ತದೆ. ನನ್ನ ಮಾವನಾದ ಗೋವಿಂದ ರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು. ಗೋವಿಂದ ರವರ ಮಗಳ ಹೆಸರು ರುಕ್ಮಿಣಿ ಆಗಿರುತ್ತದೆ. ರುಕ್ಮಿಣಿ ರವರ ಪಾಲಿಗೆ ಯಾವ ಜಮೀನು ಬಂದಿರುತ್ತದೆ ಎನ್ನುವದು ಗೊತ್ತಿಲ್ಲ. ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಏಕೆ ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಪ್ರವೇಶ ಮಾಡಲು, ದಾವಾ ಆಸ್ತಿಯಲ್ಲಿ ಬಿತ್ತನೆ ಮಾಡಲು ಪ್ರತಿವಾದಿಯರು ತೊಂದರೆ ಕೊಡುತ್ತಿದುದ್ದರಿಂದ ಈ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿಯ ಕಬ್ಜೆ ನಾನೇ ಹೊಂದಿರುತ್ತೇನೆ. ದಾವಾ ಆಸ್ತಿಯು ಬಾಲಾಜಿ ತಂ.

ತಾತ್ಯಾರಾವ ಗಾಜರೆ ರವರ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಬಾಲಾಜಿ ತಂ. ತಾತ್ಯಾರಾವ ಗಾಜರೆ ರವರ ಜಮೀನು ನನ್ನ ಕಬ್ಜೆಯಲ್ಲಿ ಇದ್ದರೂ ಸಹ ತಪ್ಪಾಗಿ ನಾನು ಆತನ ವಿರುದ್ಧ ದಾವೆ ಸಲ್ಲಿಸುವ ಬದಲಾಗಿ ಪ್ರತಿವಾದಿಗಳ ವಿರುದ್ಧ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬಾಲಾಜಿ ತಂ. ತಾತ್ಯಾರಾವ ಗಾಜರೆ, ಶಿವಾಜಿ, ಗೋಪಾಲ ಮತ್ತು ದತ್ತ ರವರು ಕಬ್ಜೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಇರುವ ಜಮೀನು ಅಂದರೆ ಸರ್ವೆ ನಂ.156 ನಮ್ಮ ಕಬ್ಜೆಯಲ್ಲಿ ಇರುವದರಿಂದ ಅವರ ವಿರುದ್ಧ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮಾವನಾದ ಗೋವಿಂದರಾವ ರವರೂ ಸಹ ಈ ದಾವೆಯ ಪ್ರತಿವಾದಿ ವಿರುದ್ಧ ಬೇರೆ ಜಮೀನಿನ ಬಾಬತ್ತು ಒಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ನನ್ನ ಗಂಡನು ಈ ದಾವೆಯ ಪ್ರತಿವಾದಿಗಳು ಮತ್ತು ಖಂಡು ರವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ನನ್ನ ಮೈದುನ ಚಂದನರವರೂ ಸಹ ಈ ದಾವೆಯ ಪ್ರತಿವಾದಿಗಳ ವಿರುದ್ಧ ಇನ್ನೊಂದು ಜಮೀನಿನ ಕುರಿತು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅದೇ ರೀತಿ ನನ್ನ ಮೈದುನನ ಹೆಂಡತಿಯಾದ ಬಬಿತಾ ರವರೂ ಸಹ ಈ ದಾವೆಯ ಪ್ರತಿವಾದಿಗಳು ಹಾಗೂ ಬಾಬುರಾವ ರವರ ವಿರುದ್ಧ ಇನ್ನೊಂದು ಜಮೀನಿನ ಕುರಿತು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲದಿದ್ದರು

ಬೇರೆ ಜಮೀನುಗಳ ಕುರಿತು ಬೇರೆ ದಾವೆಗಳು ಇರುವುದರಿಂದ ಅದೇ ರೀತಿ ಈ ದಾವೆಯನ್ನು ಸಹ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ತಲಾ 3-ಎಕರೆ 10-ಗುಂಟೆ ಜಮೀನುಗಳು 2 ಮತ್ತು 3 ನೇ ಪ್ರತಿವಾದಿಯರು ಕಬ್ಜೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.155 ರಲ್ಲಿ ಆನಂದ ರವರ ಹೆಸರಿನಲ್ಲಿ ಇರುವ ಜಮೀನು 2 ಮತ್ತು 3 ನೇ ಪ್ರತಿವಾದಿಗಳ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಲಿಲ್ಲ. ಸದರಿ ಆನಂದ ರವರ ಹೆಸರಿನಲ್ಲಿ ಇರುವ ಜಮೀನಿನಲ್ಲಿ ತೆರೆದ ಬಾವಿ ಮತ್ತು ಮೋಟರ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಶಿವಾಜಿ ರವರ ಕೊಟ್ಟಿಗೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬಾಲಾಜಿ ರವರ ಪಾಂಡವರು ದೆವರು ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಅನಾಧಿಕಾಲದಿಂದ ಬಾಲಾಜಿ ಮತ್ತು ಶಿವಾಜಿ ರವರು ಎಳ್ಳ ಅಮಾವಾಸೆ ಹಬ್ಬ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಊರಲ್ಲಿ ವಾಸ ಮಾಡುತ್ತೇನೆ. ದಾವಾ ಸಲ್ಲಿಸುವ ಸಮಯದಲ್ಲಿ ನೀವು ಪುಣೆಯಲ್ಲಿ ವಾಸ ಮಾಡುತಿದ್ದೀರಿ ಎಂದರೆ ಸಾಕ್ಷಿಯು ಅಲ್ಲಿಯೂ ಊರಿನಲ್ಲಿಯೂ ಇರುತಿದ್ದೆ ಎನ್ನುತ್ತಾರೆ.

ದಾವಾ ಸ್ವತ್ತಿನಲ್ಲಿ ಬಾವಿ ಇರುತ್ತದೆಯೋ ಇಲ್ಲವೋ ಎಂದು

ತಿಳಿದುಕೊಳ್ಳಲು ನ್ಯಾಯಾಲಯದ ನಿಯೋಗಿಯನ್ನು ನೇಮಿಸಬಹುದು. ಈ ವರ್ಷ ದಾವಾ ಸ್ವತ್ತಿನಲ್ಲಿ ಬೆಳೆಯನ್ನು ನಾವೆ ಬೆಳೆದಿದ್ದೇವೆ. ದಾವಾ ಆಸ್ತಿಗೂ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಹಾಗೂ ಪ್ರತಿವಾದಿಗಳ ತಂದೆಯ ಹೆಸರಿನಲ್ಲಿ ಇರುವ ಜಮೀನು ನಾವು ಕಬ್ಜೆ ಹೊಂದಿದ್ದು ಪ್ರತಿವಾದಿರವರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಏನೂ ಇಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸರಿ ಇದೆ

ಸಿವಿಲ್ ಮತ್ತು ಜೆ.ಎಮ್.ಎಫ.ಸಿ ನ್ಯಾಯಾಧೀಶರು
ಭಾಲ್ಕಿ